ಉದಯವಾಣಿ
ಕನ್ನಡ ದಿನಪತ್ರಿಕೆ

# ಜೈನ್ ವಿ.ವಿ. ಸಮಗ್ರ ಚಾಂಪಿಯನ್

**ಬೆಂಗಳೂರು:** ಅಖಿಲ ಭಾರತ ಅಂತರ್ ವಿವಿ ಈಜು ಚಾಂಪಿಯನ್‌ಶಿಪ್‌ನಲ್ಲಿ ಆತಿಥೇಯ ಜೈನ್ ವಿವಿ ಮಹಿಳಾ ತಂಡ ಸಮಗ್ರ ಚಾಂಪಿಯನ್‌ಶಿಪ್ ಗೆದ್ದುಕೊಂಡಿದೆ. ಒಟ್ಟು 106 ಅಂಕ ಪಡೆದ ಜೈನ್ ವಿವಿ 60 ಅಂಕಗಳಿಸಿದ ದಿಲ್ಲಿ ವಿವಿಯನ್ನು ಭಾರೀ ಅಂತರದಿಂದ ಸೋಲಿಸಿ ರನ್ನರ್ಸ್ ಅಪ್ ಪ್ರಶಸ್ತಿಗೆ ತಳ್ಳಿತು. ಪುರುಷರ ವಿಭಾಗದಲ್ಲಿ ಬೆಳಗಾವಿ 65 ಅಂಕಗಳಿಸಿ ಸಮಗ್ರ ಚಾಂಪಿಯನ್ ಮುಡಿಗೇರಿಸಿಕೊಂಡಿತು. ಮಹಿಳಾ ವಿಭಾಗದಲ್ಲಿ ಜೈನ್ ವಿವಿಯ ಮೀನಾಕ್ಷಿ ಅತ್ಯುತ್ತಮ ಈಜುಗಾರ್ತಿ, ಪುರುಷರ ವಿಭಾಗದಲ್ಲಿ ಬೆಳಗಾವಿಯ ಎಂ. ಅರವಿಂದ್ ಉತ್ತಮ ಈಜುಗಾರ ಪ್ರಶಸ್ತಿ ಪಡೆದುಕೊಂಡಿದ್ದಾರೆ.